KADW300011622022

Presented on : 14-07-2022
Registered on : 14-07-2022
Decided on : --
Duration :

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,
ಕಲಘಟಗಿ

ಸಿ.ಸಿ ನಂ.794-2022

ಪಿರ್ಯಾದಿದಾರರು ಕರ್ನಾಟಕ ಸರಕಾರದ ಪರವಾಗಿ
ಕಲಘಟಗಿ ಪೋಲಿಸ ಠಾಣೆ.

ಆಪಾದಿತ ಪಂಕಜ ಕಮಲೇಶ ಸುರನ
ವಯಾಃ 28 ವರ್ಷ, ಉಃ ಸೇಲ್ಸಮೆನ್
ಸಾಃ ಗದಗ.

**<u>ಆಪಾದನೆ</u>**

ಶ್ರೀ ಗಣೇಶ ಎನ್, ಎಂ ಎ ಎಲ್ ಎಲ್ ಬಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ಗಳು ಕಲಘಟಗಿ ಆದ ನಾನು ನಿಮ್ಮ ಮೇಲೆ ಹೊರಿಸುವ ಆಪಾದನೆ ಈ ಕೆಳಗಿನಂತಿದೆ.

ಕಲಘಟಗಿ ಪೋಲಿಸ ಠಾಣೆಯ ಸರಹದ್ದಿಯ ಕಲಘಟಗಿ–ಹುಬ್ಬಳ್ಳಿ ಎನ್‌ಎಚ್63 ರಸ್ತೆ ದಾಸ್ತಿಕೊಪ್ಪ ಗ್ರಾಮದ ಜೊಂಡಗೇರಿ ಹತ್ತಿರ ರಸ್ತೆ ಮೇಲೆ ದಿಃ 31–03–2021 ರಂದು ರಾತ್ರಿ 11–15 ಗಂಟೆ ಸಮಯದಲ್ಲಿ ಆಪಾದಿತನಾದ ನೀನು ನಿನ್ನ ಮೋಟಾರ ಸೈಕಲ್ ನಂ. ಕೆಎ–26 ಇಎ–7703 ನೇದ್ದನ್ನು ಹುಬ್ಬಳ್ಳಿ ಕಡೆಯಿಂದ ಕಲಘಟಗಿ ಕಡೆಗೆ ಅತಿ ಜೋರು ವ ನಿರ್ಲಕ್ಷ್ಯತನದಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ನಡೆಸಿಕೊಂಡು ಬಂದಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 279 ಅಡಿಯಲ್ಲಿ ಅಪಾರಾಧವನ್ನು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀನು ನಿನ್ನ ಮೋಟಾರ ಸೈಕಲ್ ನಂ. ಕೆಎ–26 ಇಎ–7703 ನೇದ್ದನ್ನು ಹುಬ್ಬಳ್ಳಿ

ಕಡೆಯಿಂದ ಕಲಘಟಗಿ ಕಡೆಗೆ ನಡೆಸಿಕೊಂಡು ಬಂದು ರಸ್ತೆ ಕಾಮಗಾರಿ ಮಾಡುತ್ತಿರುವ ಸಲುವಾಗಿ ನಿಲ್ಲಿಸಿದ ಬ್ಯಾರಿಕೇಡ ನೋಡಿ ಒಮ್ಮೆಲೇ ಬ್ರೇಕ ಹಾಕಿ ಸ್ಕಿಡ ಮಾಡಿ ಕೆಡವಿ ಅಪಘಾತಪಡಿಸಿ ನಿನ್ನ ಮೋಟಾರ ಸೈಕಲ ಹಿಂಬದಿಯ ಸೀಟಿನಲ್ಲಿ ಕುಳಿತ ಮಾರುತಿ ಮಹೇಶ ತಳವಗೇರಿ ಈತನಿಗೆ ಭಾರಿ ಪ್ರಮಾಣದ ಗಾಯಪಡಿಸಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 337 ರ ಅಡಿಯಲ್ಲಿ ಅಪರಾಧವನ್ನು ನೀವು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ನೀನು ನಿನ್ನ ಮೋಟಾರ ಸೈಕಲ್ ನಂ. ಕೆಎ–26 ಇಎ–7703 ನೇದ್ದನ್ನು ಹುಬ್ಬಳ್ಳಿ ಕಡೆಯಿಂದ ಕಲಘಟಗಿ ಕಡೆಗೆ ನಡೆಸಿಕೊಂಡು ಬಂದು ರಸ್ತೆ ಕಾಮಗಾರಿ ಮಾಡುತ್ತಿರುವ ಸಲುವಾಗಿ ನಿಲ್ಲಿಸಿದ ಬ್ಯಾರಿಕೇಡ ನೋಡಿ ಒಮ್ಮೆಲೇ ಬ್ರೇಕ ಹಾಕಿ ಸ್ಕಿಡ ಮಾಡಿ ಕೆಡವಿ ಅಪಘಾತಪಡಿಸಿ ನಿನ್ನ ಮೋಟಾರ ಸೈಕಲ ಹಿಂಬದಿಯ ಸೀಟಿನಲ್ಲಿ ಕುಳಿತ ಮಾರುತಿ ಮಹೇಶ ತಳವಗೇರಿ ಈತನಿಗೆ ಭಾರಿ ಪ್ರಮಾಣದ ಗಾಯಪಡಿಸಿ ಸದರಿಯವರು ಮರಣ ಹೊಂದುವಂತೆ ಮಾಡಿದ್ದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಅಪರಾಧವನ್ನು ನೀವು ಈ ನ್ಯಾಯಾಲಯದ ಸಂಜ್ಞಾದಲ್ಲಿ ಎಸುಗಿರುತ್ತೀರಿ.

ಪ್ರಶ್ನೆ:1) ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ?

ಆಪಾದಿತನ ಉತ್ತರಃ

ಪ್ರಶ್ನೆ:2 ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೊ?

ಆಪಾದಿತನ ಉತ್ತರಃ

(ಆಪಾದಿತನಿಗೆ ಆಪಾದನೆಯನ್ನು ಓದಿ ತಿಳಿಸಿ ನಂತರ ಆಪಾದಿತನ ಉತ್ತರವನ್ನು ಪಡೆಯಲಾಗಿದೆ.)

ಸ್ಥಳಃ ಕಲಘಟಗಿ

ದಿನಾಂಕಃ 14-06-2023

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ಗಳು
ಕಲಘಟಗಿ.